834

ಸದರೀ ದರಖಾಸ್ತುದಾರರಾದ ಗುರುಮೂರ್ತಿಶಾಸ್ತ್ರಿ ಅರ್ಜಿಯನ್ನು 1889ನೇ ಇಸವಿ ಡಿಸೆಂಬರ ತಿಂಗಳು ತಾರೀಖು 6ರಲ್ಲು ಕೇಳಿ ಸರಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಚಂದ್ರಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ನವಂಬರ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರ ಮತ್ತು ನಮ್ಮ ದಸ್ತಖತ್ತುಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀ ದೇಣೇದಾರ ಶಿಡ್ಲಘಟ್ಟದ ಕಸಬೇಲಿಯಿರುವ ಗುಡಹಳ್ಳಿ, ಚಿನ್ನಪ್ಪನಮಗ ಮುನಿಯಪ್ಪನ ವಿಷಯದಲ್ಲಿ—

ಸನ್ 1889ನೇ ಇಸವಿ ದಿವಾಳಿ ಕೇಸ್ ನಂಬರ 12.

ಹುಕುಂ.

ಮೇಲ್ಕಂಡ ಮುನಿಯಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್‌ಜಡ್ಜಿರಾದ ಮೆ॥ ಎಲ್. ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ಮುನಿಯಪ್ಪನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಕ್ರೆಡಿಟರ ತರಫ್ ಪ್ಲೀಡರ ಮೆ॥ ಗಂಗಾಧರಯ್ಯನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ— 2—3—4ನೇ ಕ್ರೆಡಿಟರು ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮುನಿಯಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1889ನೇ ಇಸವಿ ಅಕ್ಟೋಬರ 24ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ಯಾವಾಗ ಬಾಕೀ ಬಿದ್ದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಶಿಡ್ಲಘಟ್ಟದಲ್ಲಿತರಕ್ಕ ಬುಚಮ್ಮನವರ ಮುನಿಯಪ್ಪ	75	6	0	..	ಚಿಕ್ಕಬಳಾಪುರ ಮುನಸಿಫ್ ಕೋರ್ಟೆ 1888ನೇ ಒರಿಜಿನಲ್ 20ನೇ ನಂ. ಡಿಕ್ರೀಬಾಬತು	
2	ಡಿಟೋ ಚಿಕ್ಕನರಸುಬ್ಬಯ್ಯನ ಮಗಳು ಬುಚಮ್ಮ				..	ಡಿಟೋ	
3	ಡಿಟೋ ಜೇವಿನಮರದ ಕೊಮಾರಪ್ಪ ..	30	0	0	1885	ಪತ್ರದ ಬಾಬತು	
4	ಡಿಟೋ ಚಿನ್ನಗುಡಿ ರುದ್ರಪ್ಪ ..	40	0	0	1886	ಪತ್ರದ ಬಾಬತು	
	ಜುಮ್ಲಾ	145	6	0			

ದಿವಾಳಿಯಾದ ಡಿಕ್ರೀ ದೇಣೇದಾರ ಮದ್ದಗಿರಿ ತಾಲ್ಲೂಕು ಕಂಭತ್ತದಹಳ್ಳೀಲಿತಕ್ಕ ಮುದ್ದರಂಗೇಗವುಡನ ಮಗ ಕಾವಲ್ಲಯ್ಯನ ವಿಷಯದಲ್ಲಿ—

ಸನ್ 1889ನೇ ಇಸವಿ ದಿವಾಳಿ ಕೇಸ್ ನಂಬರ 143.

ಹುಕುಂ.

ಮೇಲ್ಕಂಡ ಕಾವಲ್ಲಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿರಾದ ಮೆ॥ ಯಲ್. ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ಕಾವಲ್ಲಯ್ಯನ ಪರವಾಗಿ ಅಡ್ವೊಕೇಟ ಮೆ॥ ಕೆ. ಟಿ. ನರಸುಬ್ಬಯ್ಯಂಗಾರ್ರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಕ್ರೆಡಿಟರ ತರಫ್ ಅಡ್ವೊಕೇಟ್ ಮೆ॥ ಎಲ್. ಶ್ರೀನಿವಾಸಯ್ಯಂಗಾರ್ರವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—2—3—4ನೇ ಕ್ರೆಡಿಟರು ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕಾವಲ್ಲಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1889ನೇ ಇಸವಿ ಅಕ್ಟೋಬರ 24ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರರು ಅಥವಾ ದಾವಾದಾರರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ	ಮೊಬಲಗು	ಯಾವಾಗ ದೇಣೇವುಂಟಾದದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ	ಷರಾ.
1	ಮದ್ದಗಿರಿಲಿರತಕ್ಕ ತಿಪ್ಪಾಪುರ ಸುಬ್ಬಯ್ಯ ..	86 12 0	..	ಮದ್ದಗಿರಿಮುನಸೀಫ್ ಕೋರ್ಟಿನ 1887 ಆ॥ 346ನೇ ಡಿ॥ ನೊ॥ ವಂದೂವರೆ ವರುಷಕ್ಕೆ ಮುಂಚೆ ಬರಕೊಟ್ಟ ಛಾಪಾಕಾಗದ ಪತ್ರದ ಬಾಬತು—ಜವಳಿ ಬಾಬತು ಸಹ ಛಾಪಾಕಾಗದ ಪತ್ರದ ಬಾಬತು	
2	ಡಿಟ್ಟೋ ಪದ್ದಶೆಟ್ಟಿ ರಾಮಣ್ಣ ..	17 0 0 3 0 0	..		
3	ಡಿಟ್ಟೋ ರಿಕಾರ್ಡ್‌ಕೀಪರ ವೆಂಕಟಸುಬ್ಬಯ್ಯ ..	15 0 0	..		
4	ಡಿಟ್ಟೋ ಜವಳಿ ಗವುರಪ್ಪನವರಿಗೆ ..	5 0 0	..	ಜವಳಿ ಬಾಬತು	
	ಜಮ್ಲಾ	126 12 0			

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ.

ಕೋಲಾರದ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ನಂ. 2144–5–1253.—ಕೋಲಾರದ ಟ್ರೆಜರಿ ಆಫೀಸರ್ ವ 2ನೇ ಕ್ಲಾಸ್ ಮೆಜಿಸ್ಟ್ರೇಟರಾದ ಮ॥ ಹೆಚ್. ರಾಮಾನುಜಯ್ಯಂಗಾರು 1882ನೇ ಇಸವಿ Xನೇ ಆಕ್ಟಿನ 4ನೇ ಷೆಡ್ಯೂಲ್ ಮೇರೆಗೆ ಇದರಡಿ ನಮೂದಾಗುವ ಜಾಸ್ತಿ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

(4) ಫಿರ್ಯಾದ್ ಮೇಲೆ ತಕರೀರುಗಳನ್ನು ವಿಚಾರಣೆಗೆ ತೆಗದುಕೊಳ್ಳೋಣ ಸೆಕ್ಷನ್ (191).
(5) ಪೊಲೀಸ್ ರಿಪೋರ್ಟಿನ ಮೇಲೆ ತಕ್ರೀರುಗಳನ್ನು ವಿಚಾರಣೆಗೆ ತೆಗದುಕೊಳ್ಳೋಣ (ಸೆಕ್ಷನ್ 191).

ಅಬ್ದುಲ್‌ರಹಿಮಾನ್,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ 249.

ಮೃತಪಟ್ಟ ಮಲ್ಲಣ್ಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಬಸಪ್ಪ ಮೈನರ್, ಗಾರ್ಡಿಯನ್ ಅಜ್ಜಿ ಪುಟ್ಟಮ್ಮನು ಮೃತಪಟ್ಟ ಸದರೀ ಮಲ್ಲಣ್ಣನವರಿಗೆ ಮೈನರ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ತಾ॥ ಇಬ್ಬಜಾಲ ಗ್ರಾಮ ಸ್ಥಳದ ಸದರೀ ಪುಟ್ಟಮ್ಮನವರು ಸದರೀ ವಾಸಸ್ಥನಾಗಿ ಮೃತಪಟ್ಟಮಲ್ಲಣ್ಣನವರ ಜೆಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮನವರ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 29ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ 252.

ಮೃತಪಟ್ಟ ಚೆಂದಗಾಲ್ ಸುಬ್ಬಾಚಾರ್ರ ಆಸ್ತೀವಿಷಯದಲ್ಲಿ—

ಅರ್ಜೀದಾರರು ಶೇಷಗಿರಿ ಆಚಾರ್ರು, ಮೃತಪಟ್ಟ ಸದರೀ ಸುಬ್ಬಾಚಾರ್ರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇಸ್ಥಳದ ಸದರೀ ಶೇಷಗಿರಿ ಆಚಾರ್ರು ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬಾಚಾರ್ರ ಜೆಂದಗಿ ಬಗ್ಯಾಗಿ ಬರತಕ್ಕ 1000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾರೆ.